(ಇಂದು ದಿನಾಂಕಃ **21/04/2026** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.)

**<u>ಪಾಟೀ ಸವಾಲುಃ ಮೇಲ್ಮನವಿದಾರರ ಪರಃ ಶ್ರೀ ಎಸ್.ಎಸ್.ಜಿ. ವಕೀಲರಿಂದಃ-</u>**

17. 1 ನೇ ಎದುರುದಾರ ಸಂಸ್ಥೆ ಯಾವ ವರ್ಷ ಪ್ರಾರಂಭವಾಯಿತು ಎನ್ನುವುದು ನೆನಪಿಲ್ಲ. ಯಾವ ವರ್ಷದಿಂದ ನಾನು ಅಧ್ಯಕ್ಷನಾಗಿ ಕೆಲಸ ಮಾಡುತ್ತಿದ್ದೇನೆ ಎಂದು ನೆನಪಿಲ್ಲ ಆದರೆ ಕಳೆದ 10 ವರ್ಷಗಳಿಂದ ಸದರಿ ಕೆಲಸ ಮಾಡುತ್ತಿದ್ದೇನೆ. ಯಾವ ವರ್ಷ ಸರ್ಕಾರದಿಂದ ನಮ್ಮ ಸಂಸ್ಥೆಗೆ ಅನುದಾನ ಕೊಡಲು ಪ್ರಾರಂಭಿಸಲಾಯಿತು ಎನ್ನುವುದು ನೆನಪಿಲ್ಲ.

18. 2009 ರಿಂದ ಸರ್ಕಾರದಿಂದ ನಮ್ಮ ಸಂಸ್ಥೆಗೆ ಅನುದಾನ ಕೊಡಲು ಪ್ರಾರಂಭಿಸಲಾಯಿತು ಎನ್ನುವುದು ನಿಜ. ಮೇಲ್ಮನವಿದಾರ ನಮ್ಮ ಸಂಸ್ಥೆಯಲ್ಲಿ 1990 ರಿಂದ 2009 ರವರೆಗೆ ಕೆಲಸ ಮಾಡಿದ್ದಾರೆ ಎಂದರೆ ಕೆಲಸ ಮಾಡಿದ್ದು ನಿಜ ಆದರೆ ಇಸ್ವಿ ನೆನಪಿಲ್ಲ. ಅನುದಾನ ದೊರೆತ ನಂತರ ನಮ್ಮ ಮತ್ತು ಮೇಲ್ಮನವಿದಾರರ ಮಧ್ಯೆ ತಕರಾರು ಬಂತು ಎನ್ನುವುದು ನಿಜ. ಮೇಲ್ಮನವಿದಾರರ ನೌಕರಿಯನ್ನು ಖಾಯಂ ಮಾಡಲು ನಮ್ಮ ಸಂಸ್ಥೆ ರೂ.10,00,000/- ದೇಣಿಗೆ ಕೇಳಿದ್ದು, ಮೇಲ್ಮನವಿದಾರ ದೇಣಿಗೆ ಕೊಡದೇ ಇದುದ್ದರಿಂದ ಅವರ ವಿರುದ್ಧ ಸುಳ್ಳು ಆಪಾದನೆ ಮಾಡಿದ್ದೇವೆ ಎನ್ನುವುದು ಸುಳ್ಳು.

19. 5 ನೇ ಎದುರುದಾರ ನನ್ನ ಸಂಬಂಧಿಕ ಹಾಗೂ ನಮ್ಮ ಸಂಸ್ಥೆಯಲ್ಲಿ ಕನ್ನಡ ಶಿಕ್ಷಕರಾಗಿ ಕೆಲಸ ಮಾಡುತ್ತಾರೆ ಎನ್ನುವುದು ನಿಜ. ನನ್ನ ಸಂಬಂಧಿಕನಿಗೆ ನೌಕರಿ ಕೊಡಲು ಮೇಲ್ಮನವಿದಾರರ ವಿರುದ್ಧ ಸುಳ್ಳು ಆಪಾದನೆ ಮಾಡಿದ್ದೇವೆ ಎನ್ನುವುದು ಸುಳ್ಳು. ಮೇಲ್ಮನವಿದಾರ ಎಸ್.ಎ.ಪ್ಯಾಟಿ ಮತ್ತು ಎಂ.ಎಂ.ಚಂದ್ರಗೇರಿ ಎನ್ನುವವರ ಹಾಜರಾತಿ ಸೃಷ್ಟಿ ಮಾಡಿದ ಬಗ್ಗೆ ನಾವು ದೂರು ಕೊಟ್ಟಿಲ್ಲ ಆದರೆ ಬಿ.ಇ.ಓ. ರವರಿಗೆ ವಿಷಯ ತಿಳಿಸಿದ್ದೆವು. ಎಸ್.ಎ.ಪ್ಯಾಟಿ ಮತ್ತು ಎಂ.ಎಂ.ಚಂದ್ರಗೇರಿ ಎನ್ನುವವರು ಸಹ ಮೇಲ್ಮನವಿದಾರರ ವಿರುದ್ಧ ದೂರು ಕೊಟ್ಟಿಲ್ಲ.

20. ದಿನಾಂಕಃ01/06/2010 ರಿಂದ ಮೇಲ್ಮನವಿದಾರ ಗೈರು ಹಾಜರಿ ಉಳಿದ ಎಂದು ಸುಳ್ಳು ಆಪಾದನೆ ಮಾಡಿದ್ದೇವೆ ಎನ್ನುವುದು ಸುಳ್ಳು. ಅವರು ದುರ್ವರ್ತನೆ ಮಾಡಿಲ್ಲ ಮತ್ತು ಆದೇಶ ಉಲ್ಲಂಘಿಸಿಲ್ಲ ಎನ್ನುವುದು ಸುಳ್ಳು. ಮೇಲ್ಮನವಿದಾರ ಗುಂಪುಗಾರಿಕೆ, ಪ್ರಚೋದನೆ ಮತ್ತು ಸಂಸ್ಥೆಯ ವಿರುದ್ಧದ ಚಟುವಟಿಕೆ ನಡೆಸಿಲ್ಲ ಎನ್ನುವುದು ಸುಳ್ಳು. ಮೇಲ್ಮನವಿದಾರರನ್ನು ಹೊರತು ಪಡಿಸಿ ಸದರಿ ಆಪಾದನೆ ಸಂಬಂಧ ಇತರ ಸಿಬ್ಬಂದಿ ವಿರುದ್ಧ ನಾವು ಕ್ರಮ ಕೈಗೊಂಡಿಲ್ಲ. ಮೇಲ್ಮನವಿದಾರ ಆಡಳಿತಾತ್ಮಕ ವ್ಯವಹಾರದಲ್ಲಿ ಹಸ್ತಕ್ಷೇಪ ಮಾಡಿಲ್ಲ ಎನ್ನುವುದು ಸುಳ್ಳು.

21. ಮೇಲ್ಮನವಿದಾರ ಪಡೆದ ಆದೇಶ ಪತ್ರ, ಸೂಚನೆ ಇತ್ಯಾದಿ ಕಾರ್ಯದರ್ಶಿ ಮತ್ತು ಅಧ್ಯಕ್ಷರ ಗಮನಕ್ಕೆ ತರಲು ಉದ್ದೇಶಪೂರ್ವಕ ವಿಫಲನಾಗಿಲ್ಲ ಎನ್ನುವುದು ಸುಳ್ಳು. ಅಂತಹ ದಾಖಲೆ ಗಳನ್ನು ಹಾಜರುಮಾಡಲಾಗಿದೆ. ಮೇಲ್ಮನವಿದಾರ ಸಂಸ್ಥೆಯ ಬಗ್ಗೆ ಅಧಿಕಾರಿಗಳಲ್ಲಿ ತಪ್ಪು ಅಭಿಪ್ರಾಯ ಬರುವಂತಹ ಪತ್ರ ವ್ಯವಹಾರ ಮಾಡಿಲ್ಲ ಎನ್ನುವುದು ಸುಳ್ಳು. ಅಂತಹ ದಾಖಲೆಗಳನ್ನು

ಹಾಜರುಮಾಡಲಾಗಿದೆ. ಆಪಾದನೆ ಸಂಬಂಧ ನಾವು ದಾಖಲೆಗಳನ್ನು ಹಾಜರುಮಾಡಿಲ್ಲ ಎನ್ನುವುದು ಸುಳ್ಳು. ಮೇಲ್ಮನವಿದಾರ ಕನ್ನಡ ಸಹಶಿಕ್ಷಕರ ಹುದ್ದೆಯನ್ನು ನಿರ್ವಹಿಸುವಲ್ಲಿ ಉದ್ದೇಶಪೂರ್ವಕ ವಿಫಲನಾಗಿಲ್ಲ ಎನ್ನುವುದು ಸುಳ್ಳು. ಮೇಲ್ಮನವಿದಾರ ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲ ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದ ದಾಖಲೆ ಹಾಜರುಮಾಡಲಾಗಿದೆ.

22. ಮೇಲ್ಮನವಿದಾರ ಸಮಯಕ್ಕೆ ಸರಿಯಾಗಿ ಬರಲು ತಿಳಿಸಿದಾಗ ಅವಮಾನ ಮಾಡಿಲ್ಲ ಮತ್ತು ಆದೇಶ ಉಲ್ಲಂಘಿಸಿಲ್ಲ ಎನ್ನುವುದು ಸುಳ್ಳು. ಅವರು ಬೇರೆ ಉದ್ಯೋಗ ಮತ್ತು ವ್ಯವಹಾರ ಮಾಡಿಲ್ಲ ಎನ್ನುವುದು ಸುಳ್ಳು. ನಮ್ಮ ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಆಪಾದನೆಗಳನ್ನು ಮಾಡಲಾಗಿದೆ ಎನ್ನುವುದು ಸುಳ್ಳು. ನಿಆರ್-1 ರಿಂದ 38 ದಾಖಲೆಗಳನ್ನು ಸೃಷ್ಟಿಸಿದ್ದೇವೆ ಎನ್ನುವುದು ಸುಳ್ಳು. ನಾವು ಯಾವುದೇ ನೋಟೀಸುಗಳನ್ನು ಮೇಲ್ಮನವಿದಾರರಿಗೆ ಕಳಿಸಿಲ್ಲ ಮತ್ತು ನೋಟೀಸು ಅವರಿಗೆ ಜಾರಿಯಾಗಿಲ್ಲ ಎನ್ನುವುದು ಸುಳ್ಳು.

23. ವಿಚಾರಣಾಧಿಕಾರಿ 1 ಮತ್ತು 5ನೇ ಎದುರುದಾರರ ಪರ ವಕೀಲರ ಸಹಾಯಕ ವಕೀಲರಾಗಿ ಕೆಲಸ ಮಾಡಿದ್ದರು ಎನ್ನುವುದು ಗೊತ್ತಿಲ್ಲ. ವಿಚಾರಣಾಧಿಕಾರಿ ನೋಟೀಸು ಸಹ ಮೇಲ್ಮನವಿದಾರರಿಗೆ ಜಾರಿಯಾಗಿಲ್ಲ ಎನ್ನುವುದು ಸುಳ್ಳು.

24. ಮೇಲ್ಮನವಿದಾರ ತನ್ನ ಕರ್ತವ್ಯವವನ್ನು ಸಮರ್ಪಕವಾಗಿ ನಿರ್ವಹಿಸಿದಾಗ್ಯೂ ಸುಳ್ಳು ಆಪಾದನೆ ಮಾಡಿದ್ದೇವೆ ಎನ್ನುವುದು ಸುಳ್ಳು. ಡಿಡಿಪಿಐ ಮತ್ತು ಇತರ ಅಧಿಕಾರಿಗಳಿಂದ ಪರವಾನಿಗೆ ಪಡೆದ ಕುರಿತು ಸುಳ್ಳು ಹೇಳುತ್ತಿದ್ದೇವೆ ಎನ್ನುವುದು ಸುಳ್ಳು. ಮುಖ್ಯ ವಿಚಾರಣೆಯಲ್ಲಿ ಬರೆದ ವಿಷಯ ಸರಿಯಲ್ಲ ಎನ್ನುವುದು ಸುಳ್ಳು.

**<u>ಮರು ವಿಚಾರಣೆಃ</u>** ಇಲ್ಲ.

***(***ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.***)***

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.